**ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ (ಶಿಸಕಾನಿ) ಇವರು ಸರ್ವೆ ನಂ. 23/A, 36/1A, 4A, 40/1, 40/2B, 48/2A+B, 48/1E+P+G+2A+2B, 49/1+2A/3, 49/2B+3A, 49/3B, 49/4, 50/1,2,3,4,5, 52/1+12A/1, 53/1+2+3, 54/1A, 54/2B & 54/1B+2A ಕಾಗವಾಡ, ಅಥಣಿ ತಾಲ್ಲೂಕ ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು 4000 ಟಿಸಿಡಿ ಇಂದ 10000 ಟಸಿಡಿಗೆ ಹೆಚ್ಚಿಸಲು ಹಾಗೂ ಸಹವಿದ್ಯುತ್ ಉತ್ಪಾದನೆಯನ್ನು 15 ಮೆಗಾವ್ಯಾಟ ಇಂದ 60 ಮೆಗಾವ್ಯಾಟ ಹೆಚ್ಚಿಸಲು ಹಾಗೂ ಹೊಸ 120 ಕೆಎಲ್‌ಪಿಡಿ ಸಾಮ್ಯರ್ಥದ ಮೊಲಾಸೆಸ್ ಆಧಾರಿತ ಡಿಸ್ಟಿಲರಿ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿರುತ್ತಾರೆ. ಇದರ ಪ್ರಯುಕ್ತ ಉದ್ದೇಶಿತ ಯೋಜನೆಯ ವಿಸ್ತರಣೆಯ ಹಿನ್ನೆಲೆಯಲ್ಲಿ ನಡೆದ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಕೆಗಳು.**

**ದಿನಾಂಕ:** 24-06-2019.

**ವೇಳೆ:** ಮಧ್ಯಾಹ್ನ 01.00 ಘಂಟೆಗೆ,

**ಸ್ಥಳ:** ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ, ಕಾಗವಾಡ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ.

ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ (ಶಿಸಕಾನಿ) ಇವರು ಸರ್ವೆ ನಂ. 23/A, 36/1A, 4A, 40/1, 40/2B, 48/2A+B, 48/1E+P+G+2A+2B, 49/1+2A/3, 49/2B+3A, 49/3B, 49/4, 50/1,2,3,4,5, 52/1+12A/1, 53/1+2+3, 54/1A, 54/2B & 54/1B+2A ಕಾಗವಾಡ, ಅಥಣಿ ತಾಲ್ಲೂಕ ಬೆಳಗಾವಿ ಜಿಲ್ಲೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ಕಬ್ಬು ಅರೆಯುವ ಘಟಕದ ಸಾಮರ್ಥ್ಯವನ್ನು 4000ಟಿಸಿಡಿ ಇಂದ 10000ಟಿಸಿಡಿಗೆ ಹೆಚ್ಚಿಸಲು ಹಾಗೂ ಸಹವಿದ್ಯುತ್ ಉತ್ಪಾದನೆಯನ್ನು 15 ಮೆಗಾವ್ಯಾಟದಿಂದ 60 ಮೆಗಾವ್ಯಾಟಗೆ ಹೆಚ್ಚಿಸಲು ಹಾಗೂ ಹೊಸ 120 ಕೆಎಲ್‌ಪಿಡಿ ಸಾಮ್ಯರ್ಥದ ಮೊಲಾಸೆಸ್ ಆಧಾರಿತ ಡಿಸ್ಟಿಲರಿ ಘಟಕವನ್ನು ಸ್ಥಾಪಿಸಿಲು ಉದ್ದೇಶಿಸಿರುತ್ತಾರೆ. ಈ ಬಗ್ಗೆ ದಿನಾಂಕ: 24-06-2019 ರಂದು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಇವರ ಅಧ್ಯಕ್ಷತೆಯಲ್ಲಿ ಯೋಜನೆಯ ಸ್ಥಳದಲ್ಲಿ ನಡೆಸಿದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡುವಳಿಗಳು.

| | |
|---|---|
| ಪರಿಸರ ಸಾರ್ವಜನಿಕ ಸಭೆ ನಡೆದ ಸ್ಥಳ | : ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ, ಕಾಗವಾಡ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ. |
| ಹಾಜರಿದ್ದ ಅಧಿಕಾರಿಗಳ ವಿವರ | : ಅನುಬಂಧ-1 |
| ಯೋಜನೆಯ ಪರವಾಗಿ ಹಾಜರಿದ್ದ ಪ್ರತಿನಿದಿಗಳ ವಿವರ | : ಅನುಬಂಧ-2 |
| ಭಾಗವಹಿಸಿದಂತಹ ಸಾರ್ವಜನಿಕರ ವಿವರ | : ಅನುಬಂಧ-3 |
| ಸಾರ್ವಜನಿಕರು ಲಿಖಿತ ರೂಪದಲ್ಲಿ ಸಲ್ಲಿಸಿದ ಅಹವಾಲುಗಳು | : ಅನುಬಂಧ-4 |
| ಯೋಜನಾ ವರದಿ ಕರಡು ಸಾರಾಂಶ | : ಅನುಬಂಧ-5 |
| ಕಾರ್ಖಾನೆಯ ಪ್ರತಿನಿಧಿಗಳು ಸಾರ್ವಜನಿಕರ ಅಹವಾಲಿಗೆ ನೀಡಿದ ಲಿಖಿತ ಉತ್ತರ | : ಅನುಬಂಧ-6 |

**ಪೀಠಿಕೆ:**

ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14-09-2006ರ (ತಿದ್ದುಪಡಿ ಇಲ್ಲಿಯವರೆಗೆ) ಪ್ರಕಾರ ಸದರಿ ಯೋಜನೆಯು ಪರಿಸರ, ಅರಣ್ಯ ಮತ್ತು ಮಂತ್ರಾಲಯ ಹವಾಮಾನ ಬದಲಾವಣೆ ಸಚಿವಾಲಯ ಭಾರತ ಸರಕಾರ, ಹೊರಡಿಸಿರುವ ಅಧಿಸೂಚನೆಯ ಪ್ರಕಾರ ಪರಿಸರ ವಿಮೋಚನಾ ಪತ್ರವನ್ನು ನೀಡುವ ಮೊದಲು, ಯೋಜನೆಗಳಿಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವುದು ಕಡ್ಡಾಯವಾಗಿರುತ್ತದೆ. ಅದರಂತೆ ನಿರ್ದೇಶಕರು, ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯ, ಭಾರತ ಸರಕಾರ ಇವರು ಸದರಿ ಯೋಜನೆಯ **Standards Terms of Reference (TOR)** ಅನ್ನು ದಿನಾಂಕ: 09-11-2018 ರಂದು ಅಂತಿಮಗೊಳಿಸಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಕೋರುವಂತೆ **ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ, ಸರ್ವೆ ನಂ. 23/A, 36/1A, 4A, 40/1, 40/2B, 48/2A+B, 48/1E+P+G+2A+2B, 49/1+2A/3, 49/2B+3A, 49/3B, 49/4, 50/1,2,3,4,5, 52/1+12A/1, 53/1+2+3, 54/1A, 54/2B & 54/1B+2A ಕಾಗವಾಡ, ಅಥಣಿ ತಾಲ್ಲೂಕ, ಬೆಳಗಾವಿ ಜಿಲ್ಲೆ** ಇವರಿಗೆ ತಿಳಿಸಿರುತ್ತಾರೆ. ಸದರಿ ಯೋಜನೆಯ ಅಧಿಭೋಗದಾರರು ಪತ್ರದ ದಿನಾಂಕ: 25-01-2019 ರ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಪರಿಸರ ಸಾರ್ವಜನಿಕ ಸಭೆಯನ್ನು ನಡೆಸುವಂತೆ ಕೋರಿರುತ್ತಾರೆ. ಆದ್ದರಿಂದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಗಿರುತ್ತದೆ.

ಇದರ ಅನ್ವಯ ಸದರಿ ವಿಸ್ತರಣಾ ಯೋಜನೆಯ ಕಾರ್ಯನಿರ್ವಹಣಾ ಸಾರಾಂಶ ವರದಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ತಯಾರಿಸಿ ಮತ್ತು ಪರಿಸರ ಆಘಾತ ಅಧ್ಯಯನ ವರದಿಯೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಸಲ್ಲಿಸಿರುತ್ತಾರೆ. ಸದರಿ ಅಧಿಸೂಚನೆಯ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು 30 ದಿನಗಳ ಮುಂಚೆ, ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸುವ ಬಗ್ಗೆ ವಿವರವನ್ನು ಸಾರ್ವಜನಿಕರಿಗೆ ತಿಳಿಸುವ ಸಂಬಂಧ ಪತ್ರಿಕಾ ಪ್ರಕಟಣೆಯನ್ನು ದಿನಾಂಕ: 24-05-2019 ರಂದು ರಾಜ್ಯ ಮಟ್ಟದ ಪತ್ರಿಕೆಗಳಾದ **"ದಿ ಹಿಂದೂ"** (ಆಂಗ್ಲ) **"ವಿಜಯವಾಣಿ"** ಸ್ಥಳೀಯ ಆವೃತ್ತಿ (ಕನ್ನಡ) ಮತ್ತು ದಿನಾಂಕ: 25-05-2019 ರಂದು **"ಕನ್ನಡಮ್ಮ"** (ಕನ್ನಡ), ದಿನ ಪತ್ರಿಕೆಗಳಲ್ಲಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು. ಯೋಜನೆಯ ಸುತ್ತಮುತ್ತಲು ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರ ಆಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗುವ ಸಾರ್ವಜನಿಕರು ತಮ್ಮ ಸಲಹೆ, ಅನಿಸಿಕೆಗಳನ್ನು ಟೀಕೆ ಟಿಪ್ಪಣಿಗಳನ್ನು ಹಾಗೂ ಅಹವಾಲುಗಳನ್ನು ನೇರವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಸಲ್ಲಿಸುವಂತೆ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಲಾಗಿತ್ತು.

ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಯೋಜನಾ ಸ್ಥಳದಲ್ಲಿ ದಿನಾಂಕ: 24-06-2019 ರಂದು ಮದ್ಯಾಹ್ನ 01.00 ಘಂಟೆಗೆ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ, ಇವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು.

ಪರಿಸರ ಅಧಿಕಾರಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ) ಇವರು ಡಾ. ಬೂದೆಪ್ಪ ಎಚ್. ಬಿ, ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಬೆಳಗಾವಿ ಜಿಲ್ಲೆ, ಬೆಳಗಾವಿ ಮತ್ತು ಕಾಗವಾಡದ ತಹಶೀಲ್ದಾರ ಇವರಿಗೂ ಸಹ ಹೃತ್ಪೂರ್ವಕವಾಗಿ ಸ್ವಾಗತವನ್ನು ಕೋರಿದರು ಹಾಗೂ ಈ ಸಭೆಗೆ ಆಗಮಿಸಿದಂತಹ ಎಲ್ಲಾ ಇಲಾಖೆಯ ಅಧಿಕಾರಿಗಳನ್ನು, ಯೋಜನೆಯ ಸಿಬ್ಬಂದಿಗಳನ್ನು, ಸುತ್ತಮುತ್ತಲಿನ ಹಳ್ಳಿಯ ಸಾರ್ವಜನಿಕರನ್ನು, ನಾಗರಿಕರನ್ನು, ಮಾಧ್ಯಮ ಪ್ರತಿನಿಧಿಗಳನ್ನು ಮತ್ತು ಪರಿಸರ ಪ್ರೇಮಿಗಳನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದರು. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಉದ್ದೇಶವನ್ನು ಸಭೆಗೆ ತಿಳಿಸಿ, ಯೋಜನೆಯ ಕಾರ್ಯಕಾರಿ ಸಾರಾಂಶವನ್ನು

ಸಾರ್ವಜನಿಕ ಪರಾಮರ್ಶೆಗೆ ಸಂಬಂಧಪಟ್ಟ ಕಛೇರಿಗಳಲ್ಲಿ (ಏಳು ಕಛೇರಿಗಳು) ಇಡಲಾಗಿತ್ತು ಎಂದು ತಿಳಿಸಿದರು. ಸಭೆಯನ್ನು ಮಾನ್ಯ ಅಪರ ಜಿಲ್ಲಾಧಿಕಾರಿಗಳು ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ತಮ್ಮ ಅಧ್ಯಕ್ಷತೆಯಲ್ಲಿ ನಡೆಸಿಕೊಡಲು ವಿನಂತಿಸಿಕೊಂಡರು. ಸದರಿ ಯೋಜನೆಯ ಕಾರ್ಯಚಟುವಟಿಕೆಗಳ ಬಗ್ಗೆ ಮತ್ತು ಅಳವಡಿಸಬಹುದಾದಂತಹ ಮಾಲಿನ್ಯ ನಿಯಂತ್ರಣ ಕ್ರಮಗಳ ಬಗ್ಗೆ ವಿವರವಾದ ವರದಿಯನ್ನು ಸಾರ್ವಜನಿಕರಿಗೆ ತಿಳಿಸುವಂತೆ ಯೋಜನೆಯ ಪ್ರತಿನಿಧಿಗಳಿಗೆ ಸೂಚಿಸಿದರು.

ಸದರಿ ಯೋಜನೆಯ ಪ್ರತಿನಿಧಿಯು presentation ಮಾಡುತ್ತಿರುವಾಗ ಅವರಿಗೆ ಸಾರ್ವಜನಿಕರು presentation ಮಾಡಲು ಅಡ್ಡಿ ಪಡಿಸಿದರು. ಸಾರ್ವಜನಿಕರು ತಮ್ಮ ಅನಿಸಿಕೆ ಹೇಳಲು ಆರಂಭಿಸಿದರು ಈ ಸಂದರ್ಭದಲ್ಲಿ ಶ್ರೀ ಎಚ್. ಬಿ, ಬೂದೆಪ್ಪ ಮಾನ್ಯ ಅಪರ ಜಿಲ್ಲಾಧಿಕಾರಿ ಹಾಗೂ ಅಪರ ಜಿಲ್ಲಾ ದಂಡಾಧಿಕಾರಿಗಳು ಮಾತನಾಡುತ್ತಾ, ಈಗಾಗಲೇ ನಮ್ಮ ಪರಿಸರ ಅಧಿಕಾರಿಗಳು ಹೇಳಿದ ಹಾಗೆ ಪ್ರತಿ ಒಬ್ಬರಿಗೂ ಕೂಡಾ ಘಟಕಗಳ ವಿಸ್ತರಣೆ ಬಗ್ಗೆ ಮತ್ತು ಅದಕ್ಕೆ ಸಂಬಂಧಿಸಿದಂತೆ ಪ್ರತಿ ಒಬ್ಬರಿಗೂ ಕೂಡಾ ತಮ್ಮ ಅನಿಸಿಕೆ ಹೇಳಲಿಕ್ಕೆ ಅವಕಾಶ ಕೊಡಲಾಗುತ್ತದೆ. ತಾವು ತಮ್ಮ ಹೆಸರು, ಊರು, ಹೇಳಿ ತಮ್ಮ ಅಭಿಪ್ರಾಯಗಳನ್ನು ಒಬ್ಬೊಬ್ಬರಾಗಿ ಹೇಳುತ್ತಾ ಹೋಗಬೇಕು ಅದನ್ನು ನಾವು ರೆಕಾರ್ಡ್ ಮಾಡಿ ಕಳುಹಿಸಿ ಕೊಡುತ್ತೆವೆ. ಎಲ್ಲರಿಗೂ ಅವಕಾಶ ಕೊಡುತ್ತೇನೆ ನೀವು ಮುಕ್ತವಾಗಿ ಅರ್ಧ ಗಂಟೆ ಅಲ್ಲ ಒಂದು ಗಂಟೆ ಆದರೂ ಮಾತನಾಡಬಹುದು ಮತ್ತು ಅಭಿಪ್ರಾಯ ದಾಖಲಿಸಲು ಬಂದಿದ್ದೇವೆ ಎಂದರು. ಯೋಜನೆಯ ಪ್ರತಿನಿಧಿಗೆ presentation ನ್ನು ಮುಂದುವರಿಸಲು ಹೇಳಿದರು. ಅದರಂತೆ ಯೋಜನೆಯ ಪ್ರತಿನಿಧಿಗಳು ಮತ್ತು ಯೋಜನೆಯ ಸಲಹೆಗಾರರಾದ ಇಕ್ವಿನಾಕ್ಸ್ ಎನ್ವಿರೋನಮೆಂಟ್ (ಐ) (ಪ್ರೈ) ಲಿಮಿಟೆಡ, ಪರಿಸರ ಅಭಿಯಂತರು, ಯೋಜನೆಯ ಉದ್ದೇಶಿತ ವಿಸ್ತರಣೆಯ ಬಗ್ಗೆ ವಿವರಗಳನ್ನು ಶಕ್ತಿ ಬಿಂದು ಪ್ರದರ್ಶನದ ಮೂಲಕ ಸಭೆಗೆ ತಿಳಿಸಿದರು. ಸದರಿ ವಿವರಗಳನ್ನು **ಅನುಬಂಧ-5** ರಲ್ಲಿ ಲಗತ್ತಿಸಲಾಗಿದೆ.

ಸಾರ್ವಜನಿಕರು ವ್ಯಕ್ತಪಡಿಸಿದ ಅನಿಸಿಕೆಗಳು ಈ ಕೆಳಗಿನಂತಿವೆ.

**1. ಶ್ರೀ ನಾಥಗೌಡ ಪಾಟೀಲ, ಕಾಗವಾಡ:**

ರೈತರಿಗೆ ಅನ್ಯಾಯ ಆಗುತ್ತಿರುವುದರಿಂದ 30-40 ಜನ ರೈತರು ಹೋರಾಟ ಮಾಡಿದ್ದರು. ಸದರಿ ಉದ್ದಿಮೆಯವರು ಧಾರವಾಡ ಉಚ್ಚನ್ಯಾಯಾಲಯದಲ್ಲಿ ಆ ರೈತರ ಮೇಲೆ ಮೋಸದ ದಾವೆ ಮಾಡಿದ್ದಾರೆ. ರೈತರು ಹೊಲ ಮನಿ ಬಡ್ಡಿ ಒಳಗೆ ಹಾಕಿ, ಧಾರವಾಡ ಉಚ್ಚನ್ಯಾಯಾಕ್ಕೆ ಎಡತಾಕಿದ್ದಾರೆ. ಇದಕ್ಕೆ ಕಾರಣವನ್ನು ಮೊದಲು ಹೇಳಬೇಕು. ನಮ್ಮ ಗ್ರಾಮ ಪಂಚಾಯಿತಿಗೆ ಸ್ವಲ್ಪ ನಿಯಮಗಳನ್ನು ಬರೆದು ಕೊಟ್ಟಿರುತ್ತಾರೆ. ಆದರೆ ಅವರು ಈಗ ಬರೆದು ಕೊಟ್ಟಿಲ್ಲಾ ಎನ್ನುತ್ತಾರೆ, ವರ್ಷಕ್ಕೆ 20 ಲಕ್ಷ ತೆರಿಗೆ ಕಟ್ಟುತ್ತೇವೆ ಎಂದು ಗ್ರಾಮ ಪಂಚಾಯಿತಿಗೆ ಹೇಳಿದ್ದಾರೆ. ಇಷ್ಟು ಹಣ ಕಟ್ಟಿದ್ದೇವೆ ಅದು ಯಾರಿಗೆ ಕೊಟ್ಟಿದ್ದೀರಿ ಎನ್ನುವುದನ್ನು ವೇದಿಕೆ ಮೇಲೆ ಬಹಿರಂಗ ಪಡಿಸಬೇಕು ಮತ್ತು ರಸ್ತೆಗಳನ್ನು ಮಾಡುತ್ತೇವೆ ಅಂತ ಬರೆದು ಕೊಟ್ಟಿದ್ದಾರೆ. ಒಂದು ರಸ್ತೆಯನ್ನು ಕೂಡಾ ಕಾಗವಾಡ ಗ್ರಾಮಸ್ಥರಿಗೆ ಮಾಡಿ ಕೊಟ್ಟಿರುವುದಿಲ್ಲ, ರೈತರ ಮೇಲೆ ಮೋಸದ ದಾವೆ ಯಾಕೆ ಬಂತು ಎಂದು ಕೇಳಿದರು.

ಕಾರ್ಖಾನೆಗೆ ಭೂಮಿ ತೆಗೆದುಕೊಳ್ಳುವಾಗ ಪ್ರತಿಯೊಬ್ಬರಿಗೆ ಇವರು ಆಶ್ವಾಸನೆ ಕೊಟ್ಟಿದ್ದಾರೆ ಹೊಲ ಯಾರು ಕೊಡುತ್ತೀರಿ, ಅವರ ಮನೆಯಿಂದ ಒಂದು ಹುಡುಗನನ್ನು ನೌಕರಿಗೆ ತೆಗೆದುಕೊಳ್ಳುತ್ತೇವೆ ಎಂದು ಕಾಗವಾಡದೊಳಗಿನ 10-15 ಮಂದಿ ನೌಕರಿಗೆ ಇಲ್ಲಿ ಇರಬಹುದು. HR ಹೇಳಿದ್ದಾರೆ ಅಂತ 18 ಕೀ.ಮಿ. ಹೊರಗಿನ ಹುಡುಗರು ಬೇಕಂತೆ, ಕಾಗವಾಡದಿಂದ 18 ಕೀ.ಮಿ. ದೂರ ಕಾರ್ಖಾನೆ ಹಾಕಲಿ ಮತ್ತು ಕಾರ್ಖಾನೆ ಇಲ್ಲಿ ಯಾಕೆ ಬೇಕು ಇವರಿಗೆ? ಒಬ್ಬ ಬಡವರ ಹುಡುಗ ಅವನು ಹತ್ತು ಸಲ ಇವರ ಕಛೇರಿಗೆ ಹೋಗಿ ಬಂದಿರಬೇಕು. ಇಸ್ತ್ರೀ ಮಾಡಿ ಹೊಟ್ಟೆ ತುಂಬಿಸಿಕೊಳ್ಳುವ ಹುಡುಗರು ಇದ್ದಾರೆ. ಆ ಹುಡುಗ ಅರ್ಜಿ ಕೊಟ್ಟರು ಎನು ಉತ್ತರ ಇಲ್ಲಾ, ನೂರು ಅರ್ಜಿ ಕೊಟ್ಟರೂ ಎನು ಪ್ರತಿ ಉತ್ತರ ಕೊಟ್ಟಿಲ್ಲ. ಈಗ ಎನಿದೆ ಸಕ್ಕರೆ ಉತ್ಪಾದನೆ ಸಾಕು, ಇಥನಾಲ್, ಡಿಸ್ಟಲರಿ ಬೇಡ. ಕಡಿಮೆ ಪ್ರಮಾಣದಲ್ಲಿ ಬಡ ರೈತರ ಹೊಲಗಳಿವೆ. ಈಗ ಅವರು ಸ್ಪಿರಿಟ್ ತೆಗೆದರು ಅಂದರೆ ಅವರು ಎಲ್ಲಿ ಹೋಗುವರು, ನಮ್ಮದೇನು ಭೂಮಿ ಇಲ್ಲ ಆದರೆ ಇವರಿಗೆ ಅನ್ಯಾಯ ಆಗುತ್ತಿದೆ

ಆದ್ದರಿಂದ ನಾವು ಇಲ್ಲಿಗೆ ಬಂದಿದ್ದೇವೆ ನಮ್ಮನ್ನೆಲ್ಲ ಜೈಲಿಗೆ ಹಾಕುವರು ಇದ್ದರೆ ಹಾಕಲಿ. ದೀನದಲಿತರಿಗೆ ನೌಕರಿ ಇಲ್ಲ, 34 ಜನ ಇದ್ದಾರೆ. ಅದರೊಳಗಿನ ಒಬ್ಬರಿಗೂ ನೌಕರಿ ಇಲ್ಲ. ಆ ದಲಿತರನ್ನು ಕೇಳುವವರು ಯಾರು ಇಲ್ಲ. ಅವರ ಹೊಲ ಬೇಕು ಆದರೆ ಅವರ ಮಕ್ಕಳು ಯಾಕೆ ಬೇಡ. ಪ್ರತಿಯೊಂದಕ್ಕೆ ಕಾರ್ಖಾನೆಯವರು ಉತ್ತರ ಕೊಡಬೇಕು ಎಂದರು.

**2. ಶ್ರೀ ಶಶಿಕಾಂತ ಜೋಶಿ, ಕಾಗವಾಡ:**

20-08-2010 ರಲ್ಲಿ ಇವರು ಗ್ರಾಮ ಪಂಚಾಯಾತಿಗೆ ನಾವು ಈ ತರಹ project ಮಾಡುವವರು ಇದ್ದೀವಿ 2800 MT ಕಬ್ಬು ನುರಿಸುವುದು 40 MW ವಿದ್ಯುತ್ & 120 KLPD Distillery ಗೆ ಅಂತ ಮುಂಚಿತ ಇವರು ಗ್ರಾಮ ಪಂಚಾಯಿತಿಗೆ request letter ಕಳುಹಿಸಿದ್ದರು. ಗ್ರಾಮ ಪಂಚಾಯತಿ ಸದಸ್ಯರಿಗೆ ತಿಳಿಸದೆ, PDO ಗಳಿಂದ ಅವರು no objection ತೆಗೆದುಕೊಂಡಿದ್ದಾರೆ. ಇದು ಒಂದು ಅಪರಾಧ, ಎರಡನೇಯದು No Dues issue ಮಾಡಿದಾಗ, ಕೆಲವೊಂದು Terms & Condition ಹಾಕಿದ್ದಾರೆ. ಅವು Terms & Condition ಇದುವರೆಗೆ full fill ಮಾಡಿಲ್ಲ, ಆದ್ದರಿಂದ ಇದು ಒಂದು ಅಪರಾಧ. ಆ ಮೇಲೆ ಗ್ರಾಮ ಪಂಚಾಯತ ಒಂದು proceding ಹಾಕಿ, ಗ್ರಾಮ ಪಂಚಾಯತಗೆ ಬರಬೇಕಾದ ತೆರಿಗೆ ಕಟ್ಟಬೇಕು ಅಂತ ಪ್ರತಿ ವರ್ಷ ಅವರಿಗೆ proceding ಹಾಕಿ ನೋಟಿಸು ಕೊಟ್ಟಿದ್ದೇವೆ. ದಯವಿಟ್ಟು ತಮ್ಮ ಎದುರುಗಡೆ ಎಷ್ಟು ಸಲಾ ನೋಟಿಸು issue ಆಗಿದೆ ಅದರ copy ತೆಗೆದುಕೊಂಡು ಬಂದಿದ್ದೇವೆ, ಅದನ್ನು ನಿಮಗೆ ಕೊಡುತ್ತೇವೆ ಅದರ ಮೇಲೆ ನ್ಯಾಯವಾಗಬೇಕು ಮತ್ತು 17,91,088 ರೂಪಾಯಿ ಸರಿಯಾಗಿ ತೆರಿಗೆ ಕಟ್ಟಬೇಕು. ಪದೇ ಪದೇ ಇವರಿಗೆ ಹೇಳಿದರೂ ಸಹಿತ, ಸುಮಾರು 9 ವರ್ಷಗಳವರಿಗೂ ಯಾವುದೇ ತೆರಿಗೆ ಕಟ್ಟಿಲ್ಲ, ಈ ತೆರಿಗೆ ಕಟ್ಟದಿದ್ದರೆ ಗ್ರಾಮ ಪಂಚಾಯತ ಅಭಿವೃದ್ಧಿ ಹೇಗೆ ಆಗುತ್ತದೆ, ಗ್ರಾಮ ಪಂಚಾಯತಿಗೆ ಆಗುವ ಹೋಗುವ ನಷ್ಟ ಯಾರು ತುಂಬಿ ಕೊಡುತ್ತಾರೆ. ಅದೇ ತರಹ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಬಂದಿದ್ದಾರೆ, ಅವರಿಗೆ ನಾನು ಒಂದು ಪ್ರಶ್ನೆ ಕೇಳುತ್ತೇನೆ, ಉದ್ದಿಮೆಯವರು ಯಾವ ಮಾನದಂಡ ಅನುಸರಿಸಿದ್ದಾರೆ ಅವರು ಈಗ ಹೇಳಬೇಕು. ಇಷ್ಟು ನೀರು ಫೀಲ್ಟರ್ ಆಗುತ್ತದೆ ಮತ್ತು ಇಷ್ಟು ನೀರು ಮರುಬಳಕೆಯಾಗುತ್ತದೆ. ಆದರೆ ಯಥಾವತ್ತಾಗಿ ಏನಾಗುತ್ತಿದೆ, ಎಂದು ರೈತರು ಅಥವಾ ರೈತರ ಮಕ್ಕಳು ಇಲ್ಲಿ ಬಹಿರಂಗವಾಗಿ ಹೇಳಬೇಕು. ಎರಡನೇಯದು ತಾವು ವೀಕ್ಷಣೆಗಾಗಿ ಕೆಲವೊಂದು ಕೊಳವೆ ಮತ್ತು ತೆರೆದ ಭಾವಿಗಳನ್ನು ಹೋಗಿ ಪರಿವೀಕ್ಷಣೆ ಮಾಡಿಬರಬೇಕು, ಅದರ ನೀರು ಏನು ಹೇಗೆ ಇದೆ ಅದನ್ನು ತಪಾಸಣೆ ಮಾಡಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ಅದರ ಒಳಗಡೆ ಏನಿದೆ ಅವರೇ ಹೇಳಲಿ. ಇಲ್ಲಿ ಜನರು ಒದ್ದಾಡಿ ಸಾಯುತ್ತಿದ್ದಾರೆ. ಇವರು ದೊಡ್ಡ ದೊಡ್ಡ ಭಾಷಣ ಮಾಡಿ ದೊಡ್ಡ ದೊಡ್ಡ ಕೆಲಸ ಮಾಡಿಕೊಂಡು ಹೋಗುತ್ತಾರೆ. ಕಬ್ಬು ನುರಿಸುವ ಪರಿಸ್ಥಿತಿ ಇರಬಹುದು, ಕಬ್ಬಿನ ವ್ಯಾಪ್ತಿ ಇರಬಹುದು, ಸಾಕಷ್ಟು ಮಾನದಂಡ ಸರ್ಕಾರ ಹಾಕಿ ಕೊಟ್ಟಿದೆ. ಯಾವ ಮಾನ ದಂಡದೊಳಗೆ ಇವರು ಕಾರ್ಖಾನೆ ನಡೆಸಿದ್ದಾರೆ ಸ್ವಲ್ಪ ನಮಗೆ ಬಹಿರಂಗವಾಗಿ ಹೇಳಬೇಕು. ಅದೇ ತರಹ ಮೇಲಿಂದ ಮೇಲೆ ನಮ್ಮ ಗ್ರಾಮದ ರೈತರಾಗಲಿ, ದುಡಿಯುವ ಜನರು ಆಗಲಿ ಸಾಕಷ್ಟು ಸಲ ಕಳಕಳಿಯಿಂದ ಕೇಳಿಕೊಳ್ಳುತ್ತಾ ನಮಗೆ ಈ ತೊಂದರೆ ಆಗುತ್ತದೆ ಕಾರ್ಖಾನೆಯಿಂದ ಎಂದು ಹೇಳಿದಾಗ ಉದ್ದಿಮೆಯವರು, ಎಷ್ಟು ಸಲಾ ಸ್ಪಂಧಿಸಿದ್ದಾರೆ ಅದು ಬಹಿರಂಗವಾಗಿ ಹೇಳಬೇಕು. ಇದರ ನಂತರ ಅನುಮತಿ ಕೊಡುತ್ತಿರಿ, ಬಿಡುತ್ತಿರಿ, ಅದು ಬೇರೆ ವಿಷಯ ಮೊದಲು ಆಗಿಹೋದ ಹಿನ್ನೆಲೆ ಸರಿಪಡಿಸಿಕೊಳ್ಳಬೇಕು. ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಮ್ಮ ಬೋರ್‌ವೆಲ್, ಓಪನ್‌ವೆಲ್‌ಗಳಿಂದ ಆಗುವಂತಹ ನೀರುಬಳಕೆ ಅದರ ವಿಲೇವಾರಿ ಇದರ ಎಲ್ಲಾ ಪರಿಶೀಲನೆ ಬಗ್ಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರು ನಮಗೆ ಕೊಡಬೇಕು, ಯಾಕೆಂದರೆ ಅವರು ಎಲ್ಲಾ ಕಡೆ ಸಾರ್ವಜನಿಕ ಪರಿಸರ ಸಭೆಯ ಬೋರ್ಡ ಹಾಕಿದ್ದಾರೆ. ಅವರ ಜವಾಬ್ದಾರಿ ಇದು, ಇಲ್ಲವಾದರೆ ನಿಮ್ಮ ಹೆಸರ ಮೇಲೆ ನಾವು ಸಾಮೂಹಿಕ ಆತ್ಮಹತ್ಯೆ ಮಾಡಿಕೊಳ್ಳುತ್ತೇವೆ ಎಂದು ಬರೆದುಕೊಡಬೇಕಾಗುತ್ತದೆ. ಇದರ ಮೇಲೆ ದಯವಿಟ್ಟು ತಾವು ಏನು ನ್ಯಾಯ ಮಾಡುತ್ತೀರಿ ನೋಡಿ ಎಂದು ಹೇಳಿದರು.

**3. ಶ್ರೀ ಅಣ್ಣಾಹುತಿ, ಕಾಗವಾಡ:**

ಇವರು ಹೊದ ವರ್ಷ 2017-18 ಕ್ಕೆ ಕ್ರಷಿಂಗ್ ಮಾಡಿದ್ದರು. ಆಗ 2,900/- ರೂ ಬಿಲ್ಲ ಕೊಡುತ್ತೇವೆ ಎಂದು ಹೇಳಿದರು. ಆದರೆ 2,500/- ರೂ ಕೊಟ್ಟಿದ್ದಾರೆ. ಅದರಲ್ಲಿ 2,000/- ರೂ ಒಂದು ಸಲ ಮತ್ತು 500/- ರೂ ಮತ್ತೊಂದು ಸಲ ಕೊಟ್ಟಿರುತ್ತಾರೆ. ಶುಗರ್ ಕೇನ್ ಕಂಟ್ರೋಲ್ ಆ್ಯಕ್ಟ್ ಏನು ಹೇಳುತ್ತದೆ ಎಂದರೆ 14 ದಿನ ಒಳಗೆ ಬಿಲ್ಲ ಮಾಡಲಿಲ್ಲ ಅಂದರೆ 15% ಬಡ್ಡಿ ಹಾಕಿಕೊಡಬೇಕು ಅಂತಾ ನಿಯಮ ಇದೆ. ಇವರು 15% ಬಡ್ಡಿ ಹೊಯ್ತು, FRP ಅದನ್ನು ಕೊಡುತ್ತಿಲ್ಲ ಮತ್ತು ಇವರಿಗೆ Expansion ಯಾಕೆ ಬೇಕಾಗಿದೆ? ಎಂದು ನಾನು ಪ್ರಶ್ನೆ ಕೇಳುತ್ತೇನೆ ನಮಗೆ Expansion ಬೇಡ, ಇವರಿಗೂ ಯಾವುದೇ ಅನುಮತಿ ಕೊಡಬಾರದು ಎಂದು ಹೇಳಿದರು.

**4. ಶ್ರೀ ಅನೀಲ ಪಾಂಡುರಂಗ ಕೋರೆ, ಕಾಗವಾಡ:**

ಇವರು 9 ವರ್ಷ ಆಯಿತು ಸಕ್ಕರೆ ಕಾರ್ಖಾನೆ 2010-11ರಿಂದ ನಡೆಸುತ್ತಿದ್ದಾರೆ. 2012-13, 2013-14, ಮತ್ತು 2014-15 ಮೂರು ವರ್ಷದಿಂದ ಸುತ್ತಮುತ್ತಲಿನ ರೈತರ ಹೊಲದಲ್ಲಿ ಇವರ ಕಾರ್ಖಾನೆ ನೀರು ಬರುತ್ತಿದ್ದು, ಇದರ ಸಂಬಂಧ ತಲಾಟಿ ಚೌಗಲೆ ಸಾಹೇಬರು ಎಲ್ಲರೂ ಪರಿಶೀಲನೆ ಮಾಡಿ, 1 ಕೋಟಿ 70 ಸಾವಿರ ನಷ್ಟವಾಗಿದೆ ಎಂದು ಹೇಳಿದರು. ಅವರು ಇದರ ಬಗ್ಗೆ ಏನು ಪರಿಗಣನೆಗೆ ತೆಗೆದುಕೊಂಡಿಲ್ಲ. ರೈತರಿಗೆ ವ್ಯವಸ್ಥೆ ಆಗಬೇಕು ಎಂದು ಹೇಳಿದರು.

**5. ಶ್ರೀ ರಾಜೇಂದ್ರ ಕೌರವ, ಕಾಗವಾಡ:**

ಹೊದ ವರ್ಷ ಕಬ್ಬಿನ್ ಬಿಲ್ಲ ಸಲುವಾಗಿ ನಾವು ಇವರ ಮೇಲಿನ Corporate office ಗೆ ಹೋಗಿ ಕೇಳಿದ್ದೇವೆ. ಅಲ್ಲಿಂದ ನಮಗೆ ಒದ್ದು ಹೊರಗೆ ಹಾಕಿದ್ದಾರೆ, ಬಿಲ್ಲ ಕೇಳಲಿಕ್ಕೆ ಹೋದ ಮೇಲೆ ಅವರು ಕೈಹಿಡಿದು ಹೊರಗೆ ಹಾಕಿದ್ದಾರೆ ಎಂದು ಹೇಳಿದರು.

**6. ಶ್ರೀ ರಾಜು ಶ್ರೀ ಚೌಹಾಣ, ಕಾಗವಾಡ:**

ದೀನ ದಲಿತರ ಭೂಮಿಯನ್ನು ತೆಗೆದುಕೊಂಡರು ಅದರಲ್ಲಿರುವ ಒಬ್ಬರನ್ನು ಕೆಲಸಕ್ಕೆ ತೆಗೆದುಕೊಂಡಿಲ್ಲಾ. ಅವರು ಇದ್ದ ಭೂಮಿಯನ್ನು ಕಳೆದುಕೊಂಡ ಮೇಲೆ ಏನ್ ತಿನ್ನುವುದು. ಆವಾಗ ಮಾನ್ಯ ಅಪರ ಜಿಲ್ಲಾಧಿಕಾರಿಗಳು ಇದಕ್ಕೆ ನಿನ್ನ ಅಭಿಪ್ರಾಯ ಏನೂ ಎಂದು ಕೇಳಿದರು. ಅದಕ್ಕೆ ನಮಗ ನೌಕರಿ ಕೊಡುತ್ತೀವ ಅಂದಿದ್ದರೂ ಅದು ಏನು ಕೊಟ್ಟಿಲ್ಲಾ, ಆಂತವರಲ್ಲಿ 34 ಜನ ಇದ್ದರೂ ಯಾರನ್ನೂ ಕೆಲಸಕ್ಕೆ ತೆಗೆದುಕೊಂಡಿಲ್ಲಾ, ಅವರನ್ನು ತೆಗೆದುಕೊಳ್ಳಬೇಕೆಂದು ಕೇಳುತ್ತೇವೆ ಎಂದರು.

**7. ಶ್ರೀ ಬೋರಗಾಂವೆ, ಚಂದೂರ:**

ಈ ಕಾರ್ಖಾನೆ 2011 ರಲ್ಲಿ ಪ್ರಾರಂಭವಾಗಿದೆ. ಅದಕ್ಕಿಂತ ಮುಂಚೆ ಈ ಭಾಗದ ರೈತರಿಗೆ ಕಾರ್ಖಾನೆಗೆ ಕಬ್ಬನ್ನು ಕಳುಹಿಸಲು ಅನಾನುಕೂಲತೆ ಇತ್ತು. 1994-1995 ನೇಯ ಇಸ್ವಿಯಲ್ಲಿ ಕಬ್ಬು ಮುರಿದು ರಸ್ತೆಯ ಮೇಲೆ ಹಾಕುತ್ತಿದ್ದರು. ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಭಾಗದ ಮಾಜಿ ಶಾಸಕರು ಮೆಗನ್ನವರ ಮತ್ತು ದೊಡ್ಡನ್ನವರ ಕಂಪನಿ, ಇವರು ವಿಚಾರ ಮಾಡಿ ಈ ಭಾಗದ ರೈತರಿಗೆ ಅನುಕೂಲವಾಗಲಿ ಮತ್ತು ಆರ್ಥಿಕ ಪರಿಸ್ಥಿತಿ ಒಳ್ಳೆಯದು ಮಾಡುವ ಸಲುವಾಗಿ ಮೆ: ಶಿರುಗುಪ್ಪಿ ಸಕ್ಕರೆ ಕಾರ್ಖಾನೆ ನಿಯಮಿತ ಸ್ಥಾಪನೆ ಮಾಡಿದರು ಇದು ನಮಗೆಲ್ಲ ಸಂತೋಷವಾಗಿದೆ ಮತ್ತು ಕಬ್ಬು ಚನ್ನಾಗಿ ಬರುತ್ತಾ ಇದೆ. ಆದರೆ ರೈತರಿಗೆ ಮತ್ತು ಕಾರ್ಖಾನೆಗೆ ಲಾಭದಾಯಕ ಬರಬೇಕೆಂದರೆ ಡಿಸ್ಟಿಲರಿ ಮತ್ತು ಕೋಜನ್ ಮುಂಚಿತವಾಗಿ ಪ್ರಾರಂಭ ಮಾಡಬೇಕಾಗಿತ್ತು. ಡಿಸ್ಟಿಲರಿ 2 ವರ್ಷಗಳ ಹಿಂದೆ ಮಾಡಿದ್ದರೆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತಿತ್ತು. ಹೀಗೆ ಹೇಳುವಾಗ ಮಧ್ಯದಲ್ಲಿ ಜನರು ತೊಂದರೆ ಮಾಡಿದ್ದರಿಂದ ಅವರು ತಮ್ಮ ಅನಿಸಿಕೆಯನ್ನು ಪೂರ್ಣ ಮಾಡಲು ಆಗಲಿಲ್ಲ.

8. **ಶ್ರೀ ಮಾರುತಿ ಕನಾಲ, ಕಾಗವಾಡ:**

ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರು ಪರಿಸರದ ಮೇಲಾಗುವ ಪರಿಣಾಮಗಳ ಮೇಲೆ ಜನಭಿಪ್ರಾಯ ಪಡೆದುಕೊಳ್ಳಲು ಬಂದಿದ್ದಾರೆ. ಈ ಒಂದು ಕಾರ್ಖಾನೆಯಿಂದ ನಮಗೆ ತೊಂದರೆಗಳು ಎನು ಆಗುತ್ತಿವೆ, ಕಾರ್ಖಾನೆ ಆಗುವುದರಿಂದ ಮತ್ತು ವಿಸ್ತರಣೆ ಮಾಡುವುದರಿಂದ ಅಥವಾ ವಿದ್ಯುತ್ ಘಟಕವನ್ನ ಮೇಲ್ದರ್ಜೆಗೆ ಏರಿಸುವುದರಿಂದ ಜೊತೆಗೆ ಇಥನಾಲ್ ಉತ್ಪನ್ನ ಮಾಡುವುದರಿಂದ ನಮ್ಮ ಜೀವ ಸಂಕುಲನದ ಮೇಲೆ ಏನು ಪರಿಣಾಮವಾಗುತ್ತೆ ಎನ್ನುವ ಬಗ್ಗೆ ಸಾರ್ವಜನಿಕ ಅಲೋಚನೆಯನ್ನು ಪಡೆದುಕೊಂಡು ಅನುಮತಿ ಕೊಡಬೇಕು ಬೇಡ ಎಂದು ತಿಳಿದುಕೊಳ್ಳಲು ಬಂದಿದ್ದಾರೆ. ಇಲ್ಲಿ ಸಾಕಷ್ಟು ಸಮಸ್ಯೆ ಮತ್ತು ಬೇಡಿಕೆಗಳು ಇವೆ, ಆ ಬೇಡಕೆಗಳಿಗೆ ಇದು ಸರಿಯಾದ ವೇದಿಕೆ ಅಲ್ಲಾ. ಅದಕ್ಕೆ ಪ್ರತ್ಯೇಕ ಹೋರಾಟ ಮಾಡಿ ಗುಜರಾತ ಮತ್ತು ಮಹಾರಾಷ್ಟ ಮಾದರಿಯಲ್ಲಿ ಕಬ್ಬಿನ ಬೆಲೆಯನ್ನು FRP ಪ್ರಮಾಣದಲ್ಲಿ ನಿಗದಿ ಮಾಡಿದರೆ ಆ ಪ್ರಕಾರ 10000 ಕ್ರಷರ ಮಾಡಲಿಕ್ಕೆ ವಿರೋಧವಿಲ್ಲ. ಯಾಕೆಂದರೆ ನಾವು ಕಬ್ಬು ಬೆಳಗಾರರು, ನಮ್ಮ ವಾಣಿಜ್ಯ ಬೆಳೆ ಕಬ್ಬು ಆಗಿರುವುದರಿಂದ ಅದಕ್ಕೆ 4000 ರಿಂದ 10000 ಮಾಡಿದ್ದು ಒಂದು ಸಂತೋಷ, ಆದರೆ ಪೈಪೋಟಿ ಆಗಿ ರೈತರಿಗೆ ದರ ಸಿಗಬಹುದು ಎನ್ನುವ ನೀರಿಕ್ಷೆದೊಂದಿಗೆ ನಾನು ಹೇಳುತ್ತೇನೆ. ಇದಕ್ಕೆ ನನ್ನ ವಿರೋಧವಿಲ್ಲ, ಆದರೆ ವಿದ್ಯುತ್ ಘಟಕಗಳನ್ನು ಮಾಡುತ್ತಿದ್ದಾರೆ. ಇದರಿಂದ ಬರುವಂತಹ ಬೂದಿ ಸುತ್ತಮುತ್ತಲಿನ ಜನರಿಗೆ ತೊಂದರೆ ಆಗಬಾರದು ಅದನ್ನು ತಡೆಗಟ್ಟುವತಂಹ ಮತ್ತು ಪರಿಸರಕ್ಕೆ ತೊಂದರೆ ಆಗದಂತೆ ಮತ್ತು ಪರಿಸರ ಮಾಲಿನ್ಯದವರು ಮಾನದಂಡಗಳನ್ನು ಹಾಕಿ ಮತ್ತು ಅವರ ಪ್ಯಾರಾಮೀಟರಗಳನ್ನು ಸರಿಯಾಗಿ ಆಡಳಿತ ಮಂಡಳಿಯವರು ಕಟ್ಟುನಿಟ್ಟಾಗಿ ಪಾಲಿಸಬೇಕು ಮತ್ತು ಎಲ್ಲಾ ಘಟಕಗಳನ್ನು ಸ್ಥಾಪನೆ ಮಾಡಬೇಕು, ರೈತರ ಸಮಸ್ಯೆ ಮತ್ತು ರೈತರಿಗೆ ಸ್ಪಂದಿಸಿ ವವ್ಯಹಾರ ಮಾಡಬೇಕು. ಜೊತೆಗೆ ರೈತರು ಬೇಡಿಕೆಗಳನ್ನು ಬಂದು ಕೇಳುವಾಗ ಅವರ ಮೇಲೆ ಕೇಸು ಹಾಕುವ ಘಟನೆಗಳು ಇನ್ನು ಮುಂದೆ ಆಗಬಾರದು. ನಮಗೂ ಕೂಡಾ ಒಂದು ಹೆಮ್ಮೆ ಇದೆ. ನಮ್ಮ ವ್ಯಾಪ್ತಿಯಲ್ಲಿ ದೊಡ್ಡ ಕಾರ್ಖಾನೆ ಒಂದು ಸ್ಥಾಪನೆಯಾಗಿದೆ. ಇಲ್ಲಿ ವಾಸಿಸುವ ವ್ಯಕ್ತಿಗಳಿಗೆ ಕೆಲಸಗಳನ್ನು ಹೆಚ್ಚಿನ ಪ್ರಮಾಣದಲ್ಲಿ ನೀಡಬೇಕು. ಈ 10 ಕೀ ಮೀ ಪರಿಸರ ವ್ಯಾಪ್ತಿಯಲ್ಲಿ ಕಡ್ಡಾಯವಾಗಿ ಗಿಡ ಮರಗಳನ್ನು ಬೆಳಸಬೇಕು ಎಂದು ಪರಿಸರ ಮಾಲಿನ್ಯದಲ್ಲಿ ಷರತ್ತು ಇದೆ. ಅದನ್ನು ಕಡ್ಡಾಯವಾಗಿ ಪಾಲನೆ ಮಾಡಬೇಕು ಸುತ್ತಮುತ್ತಲಿನ ಅಂತರ್ಜಲ ಕೆಟ್ಟಿದೆ, ಮೊದಲು ಫ್ಯಾಕ್ಟರಿ ಪ್ರಾರಂಭವಾದಾಗ ಶುದ್ದ ನೀರು ಬೋರವೆಲ್‌ನಿಂದ ಸಿಗುತಿತ್ತು ಆದರೆ ಕಾರ್ಖಾನೆ ಆದಾಗಿನಿಂದ ಬೋರವೆಲ್ ಮತ್ತು ಬಾವಿ ನೀರು ಕಲುಷಿತವಾಗಿ ಜನರಿಗೆ ಕುಡಿಯಲಿಕ್ಕೆ ಬಾರದಂತೆ ನೀರು ಬರುತ್ತಾ ಇದೆ. ಇದಕ್ಕೂ ಸಹಿತ ಕ್ರಮ ವಹಿಸಬೇಕು ಮತ್ತು 10 ಕೀ ಮೀ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಸರ್ವತೋಮುಖ ಅಭಿವೃದ್ಧಿಗೆ ಕಾರ್ಖಾನೆ ಬಂಡವಾಳದ 2.5% ರಷ್ಟು ಹಣವನ್ನು ಅಭಿವೃದ್ಧಿಗೆ ಕೊಡಬೇಕು. ಕಾರ್ಖಾನೆಯವರು ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಿ ಕಾರ್ಖಾನೆಗೆ ಅನುಮತಿ ಮಾಡಿಕೊಡಬೇಕೆಂದು ನನ್ನ ಅಭಿಪ್ರಾಯ.

9. **ಶ್ರೀ ಅರುಣ ಜೋಶಿ, ಕಾಗವಾಡ:**

ಸದರಿ ಕಾರ್ಖಾನೆ ವಿಸ್ತರಣೆಯನ್ನು ನಾನು ಸ್ವಾಗತ ಮಾಡುತ್ತೇನೆ, ನನ್ನ ವಿನಂತಿ ಏನೆಂದರೆ ಯಾವುದೇ ತಪ್ಪು ತಡೆಗಳು ಆದರೂ ಕೂಡಾ ನಾನು ಮರಾಠಿಯಲ್ಲಿ ಮಾತನಾಡಲು ಬಯಸುತ್ತೇನೆ. ನಾನು ಒಬ್ಬ ರೈತ/ಕೃಷಿಕ, ಮಾಜಿ ಗ್ರಾಮ ಪಂಚಾಯತ ಸದಸ್ಯನಾಗಿದ್ದು, ಈ ಭಾಗದಲ್ಲಿ ನಿಸರ್ಗದ ಪ್ರೇಮಿ ಆಗಿರುತ್ತೇನೆ, ಈ ಸಭೆಯಲ್ಲಿ ನಿಮ್ಮಲ್ಲಿ ಮೊದಲನೆಯದಾಗಿ ನನ್ನ ವಿನಂತಿ ಏನೆಂದರೆ ಈ ಜಾಗದಲ್ಲಿ ಬಹಳಷ್ಟು ತಪ್ಪುಗಳಾಗಿರುತ್ತವೆ, ಅವುಗಳನ್ನು ನೀವು ಸುಧಾರಣೆ ಮಾಡಿಕೊಳ್ಳಬೇಕಾಗಿರುವುದು ನನ್ನ ಮೊದಲನೇಯ ವಿಷಯ. ಸದರಿ ಕಾರ್ಖಾನೆ ಪ್ರಾರಂಭ ಮಾಡಲು 1996 ರಲ್ಲಿ ಅನುಮತಿ ದೊರೆಯಿತು. ತದನಂತರ 2011 ರಲ್ಲಿ ಕಾರ್ಖಾನೆ ಪ್ರಾರಂಭವಾಯಿತು, ಆ ಸಮಯದಲ್ಲಿ ನಾನು ಗ್ರಾಮ ಪಂಚಾಯತಿಯಲ್ಲಿ ಉಪಾಧ್ಯಕ್ಷನಾಗಿದ್ದೆ. ಅವಾಗ ಕಾರ್ಖಾನೆ ಆಡಳಿತ ಮಂಡಳಿಯವರ ಹಾಜರಿಯಲ್ಲಿ ಗ್ರಾಮ ಪಂಚಾಯತಿಯಲ್ಲಿ ಒಂದು ಸಭೆ ನಡೆದಿತ್ತು, ಆವಾಗ ಕೆಲವೊಂದು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿರುತ್ತದೆ. ಸದರಿ ನಿರ್ಣಯಗಳನ್ನು ಕೈಗಾರಿಕೆಯು ಇನ್ನೂವರೆಗೂ ಪಾಲಿಸಿಕೊಂಡು ಹೋಗಿರುವುದಿಲ್ಲ. ಅದರಲ್ಲಿ ಬಹಳ ಮುಖ್ಯವಾದದ್ದು ಕೈಗಾರಿಕೆಯವರು ಕೃಷಿಕರು/ ರೈತರಿಗಾಗಿ ಹಣವನ್ನು ಖರ್ಚುಮಾಡುವುದು, ರಸ್ತೆ ಮತ್ತು ಬೀದಿ ದೀಪಗಳನ್ನು ಅಳವಡಿಸಿಕೊಡಬೇಕು.

ಈ ಕಾರ್ಖಾನೆಯು 4000-10000ಗೆ ವಿಸ್ತರಿಸಲು ಯಾವ ರೈತರ ವಿರೋಧವಿರುವುದಿಲ್ಲ. ethnol ಉತ್ಪನ್ನ ತಯಾರಿಕೆಯನ್ನು ಅಳವಡಿಸಿಕೊಳ್ಳುವುದು ಬಹಳಷ್ಟು ಅವಶ್ಯಕವಾಗಿದೆ, ಇದು ಒಂದು ಉಪ ಉತ್ಪಾದನೆ ಆಗಿರುತ್ತದೆ. ಕೇವಲ ಕಬ್ಬು ನುರಿಸಿ ರೈತರಿಗೆ ಹೆಚ್ಚಿನ ಬೆಲೆಯನ್ನು ನೀಡುವುದು ಕಷ್ಟವಾಗುತ್ತದೆ. ಅದಕ್ಕಾಗಿ ಉಪ ಉತ್ಪನಗಳ ತಯಾರಿಕೆಯು ಅವಶ್ಯಕವಾಗಿರುತ್ತದೆ. ಸದರಿ ವಿಷಯ ಆಧರಿಸಿ ನಾನು ಮಾತನಾಡುತ್ತಿದ್ದೇನೆ, ಸದರಿಯವರು 10000ಗೆ ವಿಸ್ತರಿಸಲು ನಂತರ, 120 KLPD ethnol ಘಟಕವನ್ನು ಮಾಡಲು ಅನುಮತಿಸುತ್ತೇವೆ. ಸದರಿ ವಿಷಯದಲ್ಲಿ ಎಲ್ಲರದೂ ಒಂದೇ ತರಹದ ತೊಂದರೆ ಇದ್ದು, ಅದನ್ನು ಕಾರ್ಖಾನೆಯ ಮಂಡಳಿಗೆ ಹೇಳುವುದೇನೆಂದರೆ, ಈಗಾಗಲೇ ಕಾರ್ಖಾನೆಗೆ ರೈತರು ಜಮೀನುಗಳನ್ನು ನೀಡಿರುತ್ತಾರೆ. ಸದರಿ ರೈತರನ್ನು ಕಾರ್ಖಾನೆಯಲ್ಲಿ ಉದ್ಯೋಗಕ್ಕೆ ನೀವು ತೆಗೆದುಕೊಳ್ಳಬೇಕು.

ಸದರಿ ಕೈಗಾರಿಕೆಯು ನೀರನ್ನು 93% ಪುನರಾವರ್ತನೆ ಮಾಡಲಾಗುವುದೆಂದು ತಿಳಿಸಿರುತ್ತಾರೆ. ಅದರಂತೆ 100% ರಲ್ಲಿ 93% ಮಾಡುವುದಾದರೇ ಉಳಿದ 7% ಏನು ಮಾಡುತ್ತಾರೆ ಅದರ ವಿಚಾರ ತಿಳಿಸಬೇಕು. ಹಾಗೆ ಇವರೂ 7% ಕಲುಷಿತ ನೀರು ಅಂತಾ ತಿಳಿಸಿರುವರು. ಘನತ್ಯಾಜ್ಯ ಸಂಬಂಧಿತ ವಿಷಯವಾಗಿ ಏನು ಕ್ರಮ ಕೈಗೊಳ್ಳುವರು ಎಂಬುದನ್ನು ತಿಳಿಸಬೇಕು. ಮತ್ತೊಂದು ಮಹತ್ವದ ವಿಷಯವನ್ನು ಸರ್ಕಾರಕ್ಕೆ & ಆಡಳಿತ ಮಂಡಳಿಯವರಿಗೆ ತಿಳಿಸುವುದೇನೆಂದರೆ ನಮ್ಮ ಸಮೀಪದ ಮಹಾರಾಷ್ಟ್ರ ಬಳಿ ಒಂದು ಕಾರ್ಖಾನೆ ಇದೆ, ಅವರು ಪ್ರತಿ ಟನ್ ಕಬ್ಬಿಗೆ ರೂ 2870ಗಳ ಬೆಲೆಯನ್ನು ನೀಡಿವೆ, ಅದರೆ ನೀವು ಹೇಳಿರುತ್ತಿರಿ ಪ್ರತಿ ಟನ್ ಕಬ್ಬಿಗೆ ರೂ 3000ಗಳ ಬೆಲೆ ಕೊಟ್ಟಿದ್ದೇವೆ ಅಂತಾ, ಆದರೆ ನನಗೆ ಗೊತ್ತಿರುವ ಮಾಹಿತಿಯಂತೆ ನೀವು 2870 ರೂ ಕೊಟ್ಟಿದ್ದೀರಿ. ಅದಕ್ಕಾಗಿ ರೈತರಿಗೆ ಸುಖ ಕಾಯುವ ಸಲುವಾಗಿ ಈ ದೇಶದಲ್ಲಿ ರೈತರ ಪರ ಆಳ್ವಿಕೆ ಬರಬೇಕು, ಆದ ಕಾರಣ ಸರ್ಕಾರ ನಿಗದಿ ಪಡಿಸಿದ FRPದರವನ್ನು ನೀವು ನೀಡಬೇಕು.

ಈ ಕಾರ್ಖಾನೆ ಮೇಲ್ದರ್ಜೆಗೆ/ವಿಸ್ತರಣೆ ಮಾಡಲು ಯಾರ ವಿರೋಧವಿಲ್ಲ. ಆದರೆ ಗಿಡಗಳನ್ನು ಹಚ್ಚಿದರೆ ಮಾಲಿನ್ಯ ಆಗುವುದಿಲ್ಲ. ಎಲ್ಲಾಕ್ಕಿಂತ ಮುಖ್ಯ ವಿಷಯ ಏನೆಂದರೆ ಶುಗರ್ಸ್ ಕೇನ ಆಕ್ಟ್ ಪ್ರಕಾರ, ರೈತರು ಕಬ್ಬು ನೀಡಿದ 14 ದಿನ ಒಳಗೆ ಬಿಲ್ಲ ಪಾವತಿಸಿಬೇಕು, ಅದರಿಂದ ಅವರು ಸುಖದಿಂದ ಇರುತ್ತಾರೆ, ಇದರ ಜೊತೆಗೆ ನನ್ನ ವಿನಂತಿ ಏನೆಂದರೆ ಈ ಜಾಗದ ರೈತರಿಗೆ ಒಳ್ಳೆಯದನ್ನು ಮಾಡುವ ಸಲುವಾಗಿ ಮತ್ತು ಅಕ್ಕ-ಪಕ್ಕದ ರೈತರಿಗೆ ಅನ್ಯಾಯ ಆಗದ ರೀತಿ ನೋಡಿಕೊಳ್ಳಿ ಮತ್ತು ರೈತರ ಮೇಲೆ ಕೇಸನ್ನು ದಾಖಲಿಸಿರುತ್ತಿರಿ, ಅದಕ್ಕಾಗಿ ಕಾಗವಾಡ ಜನರ ಪರವಾಗಿ ಕಾರ್ಖಾನೆ ಮಂಡಳಿಯವರಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಸದರಿ ಕೇಸಗಳನ್ನು ಹಿಂತೆಗೆದುಕೊಳ್ಳುವಂತೆ ತಿಳಿಸಿದರು.

**10. ಶ್ರೀಮತಿ ಮಂಜುಳಾ, ಚಿತ್ರದುರ್ಗ:**

ನಮ್ಮ ಅನಿಸಿಕೆಗಳನ್ನು ಹೇಳುತ್ತೇವೆ ಅಷ್ಟೆ. ವಿನಹ ನಿಮಗೆ ವಿರೋಧ ಅಂತಾ ಖಂಡಿತಾ ನಮ್ಮ ಭಾವನೆ ಅಲ್ಲಾ, ಅಂತಾ ಹೇಳಲಿಕ್ಕೆ ಇಷ್ಟ ಪಡುತ್ತಿದ್ದೇನೆ. ನನ್ನ ಹೆಸರು ಮಂಜುಳಾ ಚಿತ್ರದುರ್ಗದಿಂದ ಎನ್. ಜಿ. ಓ. ವತಿಯಿಂದ ಬಂದಿದ್ದೇನೆ. ವೇದಿಕೆ ಮೇಲೆ ಆಸಿನರಾದಂತಹ ಗಣ್ಯಾತೀತ ಗಣ್ಯರಿಗೆ ಮತ್ತು ಪತ್ರಿಕಾ ಮಾಧ್ಯಮದವರಿಗೆ ಮತ್ತು ಪೋಲಿಸ್ ಸಿಬ್ಬಂದಿಗೆ, ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿಯವರಿಗೆ ಧನ್ಯವಾದಗಳನ್ನು ತಿಳಿಸುತ್ತಾ ಮಾತನಾಡುತ್ತಿರುವಾಗ, ಸಾರ್ವಜನಿಕರಲ್ಲಿ ಒಬ್ಬರು ಅವರಿಗೆ ಪ್ರಶ್ನೆಯನ್ನು ಕೇಳುತ್ತಾರೆ (ಬೆಳಗಾವಿ ಜಿಲ್ಲೆಯಲ್ಲಿ ಎಷ್ಟು ಕಾರ್ಖಾನೆಗಳಿವೆ ಎಂದು ನಿಮಗೆ ಗೊತ್ತಾ?) ಇದಕ್ಕೆ ಶ್ರೀಮತಿ ಮಂಜುಳಾರವರು ಗೊತ್ತಿರುವುದಾಗಿ ಹೇಳಿದರು. ಆವಾಗ ಎಷ್ಟು ಎಂದು ಮರು ಪ್ರಶ್ನಿಸಿದರು. ಈ ಸಮಯದಲ್ಲಿ ಶ್ರೀಮತಿ ಮಂಜುಳಾರವರು ಗೊತ್ತಿದ್ದೆ ಮಾತನಾಡಲಿಕ್ಕೆ ಬಂದಿದ್ದು, ಅದಕ್ಕೆ ಮಾತನಾಡಲು ಅವಕಾಶ ಕೊಡಿ ಎಂದು ಕೇಳಿದರು. ಮಾನ್ಯ ಅಪರ ಜಿಲ್ಲಾಧಿಕಾರಿಗಳು ಸಹ ಶ್ರೀಮತಿ ಮಂಜುಳಾರವರಿಗೆ ಮಾತಾಡಲಿಕ್ಕೆ ಅವಕಾಶ ಕೊಡಿ ಎಂದು ಸಾರ್ವಜನಿಕರಿಗೆ ತಿಳಿಸಿದರು. ಈ ಸಮಯದಲ್ಲಿ ಶ್ರೀಮತಿ ಮಂಜುಳಾ ಮತ್ತು ಸಾರ್ವಜನಿಕರಲ್ಲಿ ಮಾತಿನ ಚಕಮಕಿಗಳು ನಡೆದಾಗ ಅಪರ ಜಿಲ್ಲಾಧಿಕಾರಿಗಳು ಶ್ರೀಮತಿ ಮಂಜುಳಾರವರಿಗೆ ದಯವಿಟ್ಟು ತಮ್ಮ ಹೇಳಿಕೆ ಏನೇ ಇದ್ದರೂ ಅದನ್ನು ಲಿಖಿತ ರೂಪದಲ್ಲಿ ಈ ಸಭೆಗೆ ಸಲ್ಲಿಸುವಂತೆ ತಿಳಿಸಿದರು.

**11. ಶ್ರೀ ಅಜಿತ ಕೌರವ, ಕಾಗವಾಡ:**

ಕಾರ್ಖಾನೆಯವರು ಪ್ರೋಜೆಕ್ಟ ಮಾಡುವ ಸಲುವಾಗಿ ಈಗಾಗಲೇ ರೈತರು ಕೆಲವೊಂದು ಬೇಡಿಕೆ ಇಟ್ಟಿದ್ದಾರೆ. ಆ ಬೇಡಿಕೆಗಳನ್ನು ಕಾರ್ಖಾನೆಯವರು ಬೇಗನೆ 100% ಪೂರ್ಣವಾಗಿ ಪೂರೈಸಬೇಕು, ಎಲ್ಲಾ ಸಮಸ್ಯೆಗಳನ್ನು ಬೇಗ ಬಗೆಹರಿಸಿಬೇಕು. ಈಗ ಅರುಣ ಜೋಶಿ ಹೇಳಿದಂತೆ FRP ಪ್ರಕಾರ ತಾವು ಬಿಲ್ಲಗಳನ್ನು 2500 ವರೆಗೆ ಕೊಟ್ಟಿದ್ದೀರಿ, ಗಡಿ ರಾಜ್ಯದಲ್ಲಿ 3050, 3000, 2800, 2700 FRP ಪ್ರಕಾರ ಬಿಲ್ಲ ಕೊಟ್ಟಿದ್ದಾರೆ. ಅದೇ ಪ್ರಕಾರ ತಾವು ಬಿಲ್ಲ ಕೊಡುವ ಪ್ರಯತ್ನ ಮಾಡಬೇಕು. ರೈತರಿಗೆ ನಿಸರ್ಗ ಸಹಕಾರ ಇಲ್ಲಾ, ಹೊಳೆಯಲ್ಲಿ ನೀರು ಇಲ್ಲಾ, ಈ ಸುಡು ಬಿಸಿಲಿನಲ್ಲಿ ಬೆಳೆ ಒಳ್ಳೆಯದಾಗಿ ಬರುವುದಿಲ್ಲಾ ಮತ್ತು ಇದೆಲ್ಲದೆ ರಸಗೊಬ್ಬರದ ದರಗಳು ಗಗನಕ್ಕೇರಿವೆ, ರೈತರಿಗೆ ಯಾವುದೇ ತರಹದ ಲಾಭವಿಲ್ಲ. ದಯಮಾಡಿ ತಾವು ರೈತರ ಬೇಡಿಕೆಗಳನ್ನು ಪೂರ್ಣ ಮಾಡಿ, ಡಿಸ್ಟಿಲರಿ, ಇಥನಾಲ್ ಘಟಕ ಮೇಲ್ದರ್ಜೆಗೆ/ವಿಸ್ತರಣೆ ಮಾಡಲು ಯಾರದು ರೈತರ ವಿರೋಧ ಇರುವುದಿಲ್ಲ ಎಂದು ಹೇಳುವಾಗ, ಮಧ್ಯದಲ್ಲಿ ಸಾರ್ವಜನಿಕರು ಅವರ ಅನಿಸಿಕೆ ವಿವರಿಸಲು ಬಿಡಲಿಲ್ಲ, ನಂತರ ಅವರು ಆಡಳಿತ ಮಂಡಳಿಯವರು ಪೂರ್ಣ ಅಭ್ಯಾಸ ಮಾಡಿ ನಿರ್ಧಾರ ತೆಗದುಕೊಳ್ಳಬೇಕು ಎಂದು ಹೇಳಿದರು.

**12. ಶ್ರೀ ದೀಪಕ ಶಿಂಧೆ , ಕಾಗವಾಡ:**

ನಾನು ಕಾಗವಾಡ, ಅಥಣಿ ತಾಲ್ಲೂಕಿನವನು. ಈ ಭಾಗದಲ್ಲಿನ ರೈತರ ಪ್ರಮುಖ ಬೇಡಿಕೆ ಏನೆಂದರೆ ಡಿಸ್ಟಿಲರಿ ಬೇಡ. ಪರಿಸರಕ್ಕೆ ಪೂರಕವಾಗಿ ಮಾಡಿದರೆ, ಪರಿಸರ ಮಾಲಿನ್ಯ ಆಗದಂತೆ ಮಾಡಿದರೆ ಅದಕ್ಕೆ ಯಾರದು ವಿರೋಧ ಇಲ್ಲಾ, ಆದರೆ ಈಗಾಗಲೇ ಕಾರ್ಖಾನೆ ರೈತರಿಗೆ FRP ದರ ನೀಡುತ್ತಿರುವುದಿಲ್ಲ ಅದು ಒಂದು ಸಮಸ್ಯೆ ಇದೆ. ಈಗಾಗಲೇ ಈ ಭಾಗದಲ್ಲಿ ಸಾಕಷ್ಟು ಬರಗಾಲ ಬಿದ್ದಿರುವುದರಿಂದ ಕುಡಿಯುವ ನೀರಿಗಾಗಿ ಪರದಾಟ ನಡೆದಿದೆ. ಲಕ್ಷ ಗ್ಯಾಲನಗಟ್ಟಲೇ ಕೃಷ್ಣಾ ನದಿಯಿಂದ ಕಾರ್ಖಾನೆಯವರು ನೀರು ಬಳಸುತ್ತಾರೆ. ಆದರೆ ಬೇಸಿಗೆಯಲ್ಲಿ 2-3 ಟ್ಯಾಂಕರ್ ನೀರು ಕೊಡಲಿಕ್ಕೆ ಏನು ಆಗುತ್ತೆ ಇವರಿಗೆ? ಪ್ರತಿ ಬೇಸಿಗೆಯಲ್ಲಿ ನೀರು ಕೊಡುವ ಯೋಜನೆ ಮಾಡಬೇಕು. ಕಾರ್ಖಾನೆಯವರು ಮೊದಲು ನೀರು ಕೊಡಬೇಕು ಮತ್ತು ಯಾರ ಕಬ್ಬು ತೆಗೆದುಕೊಳ್ಳುತ್ತಾರೆ, ಆ ರೈತರ ಮನೆಗಳಿಗೆ ಟ್ಯಾಂಕರ ಮೂಲಕ ನೀರನ್ನು ಪೂರೈಸಬೇಕು. ಆ ಮೇಲೆ ಯಾರ ಕಬ್ಬು ನಷ್ಟ ಆದರೆ ಸರ್ಕಾರ ಅಷ್ಟೆ ಪರಿಹಾರ ಕೊಡಬೇಕು ಅಂತಾ ಅಲ್ಲಾ, ಯಾವ ಕಾರ್ಖಾನೆಯನ್ನು ನಂಬಿಕೊಂಡು ಕಬ್ಬು ಬೆಳೆದಿರುತ್ತಾರೆ, ಅವರೂ ಸಹ ಪರಿಹಾರ ಕೊಡಬೇಕು. ಯಾವ ಕಬ್ಬು ಬಂದಾಗ ಇವರು ಬೆಲೆ ನಿಗದಿ ಪಡಿಸಿ ಸಕ್ಕರೆ ಮಾಡಿಕೊಂಡು ಮಾರಿ ಲಾಭಗಳಿಸುತ್ತಾರೆಲ್ಲಾ, ನಷ್ಟಕ್ಕೀಡಾದಂತಹ ರೈತರಿಗೆ ಪರಿಹಾರ ಕೊಡಬೇಕು. ಇವು ಎರಡೂ ಪ್ರಮುಖ ಬೇಡಿಕೆ ಆಗಿವೆ. ಡಿಸ್ಟಿಲರಿ ಬೇಡವೆಂದು ಇದೊಂದು ಪ್ರಮುಖ ಬೇಡಿಕೆ ಇದೆ, ಅದಕ್ಕೂ ಕೂಡಾ ನಮ್ಮ ಒಪ್ಪಿಗೆ ಇದೆ. ಡಿಸ್ಟಿಲರಿ ಬೇಡಾ ಎಂದೂ ಹೇಳಿದರು.

**13. ನಾಗೇನಹಳ್ಳಿ ಹಾವೇರಿ ಜಿಲ್ಲೆ, ರಾಣಿಬೆನ್ನೂರ ತಾಲ್ಲೂಕಿನ ಸಮಗ್ರ ಪರಿವರ್ತನಾ ಸಮುದಾಯ NGO ಸಂಸ್ಥೆ:**

ಪ್ರಥಮವಾಗಿ ಶಿರಗುಪ್ಪಿ ಆಡಳಿತ ಮಂಡಳಿಯವರಿಗೆ ಶುಭವಾಗಲಿ ಮತ್ತು ಸುತ್ತಮುತ್ತಲಿನ ಗ್ರಾಮಗಳು ಈ ಕಂಪನಿಯಿಂದ ಅಭಿವೃದ್ಧಿ ಆಗಲಿ ಎಂದು ಹಾರೈಸುತ್ತಾ, ನಾನು ರಾಣಿಬೆನ್ನೂರ ತಾಲ್ಲೂಕಿನ ಸಮಗ್ರ ಪರಿವರ್ತನಾ ಸಮುದಾಯ NGO ಸಂಸ್ಥೆಯ ಒಬ್ಬ ಸಾಮಾಜಿಕ ಕಾರ್ಯಕರ್ತನಾಗಿ ನಾನು ಇಲ್ಲಿ ಯಾರ ಪರವಾಗಿ ಆಗಲಿ ಯಾರ ವಿರೋಧವಾಗಲಿ ಹೇಳಲು ಬಂದಿಲ್ಲ. ನನ್ನ ಉದ್ದೇಶ, ನಿಮ್ಮ ಉದ್ದೇಶ, ನಾನು ನಿಮ್ಮ ಪರವಾಗಿ ನಮ್ಮ ಜಿಲ್ಲಾಧಿಕಾರಿಗಳಿಗೂ ಮತ್ತು ಶಿರಗುಪ್ಪಿ ಶುಗರ್ಸ ಕಂಪನಿಯ ಮಾಲಿಕರಿಗೂ ಒಂದು ವಿನಂತಿ ಮಾಡಿಕೊಳ್ಳುತ್ತೇನೆ ದಯವಿಟ್ಟು ಈ ಪಕ್ಕದ ಗ್ರಾಮ ಕಾಗವಾಡ ಗ್ರಾಮಕ್ಕೆ ಸಿ.ಎಸ್.ಆರ್. ಎಂಬ ಮತ್ತು ತೆರಿಗೆ ಎನು ಬರಬೇಕಿತ್ತು ಅದು ಬಂದಿಲ್ಲಾ ಎಂದು ರೈತರ ವಿರೋಧವಿದೆ. ಅದೊಂದು ಮುಟ್ಟಿಸಿ ಮತ್ತು ಅಕ್ಕ ಪಕ್ಕದ ಗ್ರಾಮದವರಿಗೆ ನೀವು ಯಾರಿಗೆ ಉದ್ಯೋಗ ನೀಡಿಲ್ಲ, ಅವರಿಗೆ ಉದ್ಯೋಗ ಕೊಡಸಿ, ಇನ್ನುಳಿದ ರಸ್ತೆ, ಕಾಲುವೆ, ನೀರಿನ ಸಮಸ್ಯೆ ಇದೆ

ಮತ್ತು ಇದರ ಬಗ್ಗೆ ಕುಲಂಕುಶವಾಗಿ ಆಡಳಿತ ಮಂಡಳಿ ಮತ್ತು ಜಿಲ್ಲಾಧಿಕಾರಿಗಳು ಚರ್ಚಿಸಿ ಈ ಸಮಸ್ಯೆಯನ್ನು ಬಗೆ ಹರಿಸುತ್ತಾರೆ ಎಂದು ನನಗೆ ನಂಬಿಕೆ ಇದೆ. ಆದ್ದರಿಂದ ಇವರ ಎಲ್ಲಾ ಸಮಸ್ಯೆ ಬಗೆಹರಿಸಿ. ಈ ಗ್ರಾಮದವರಿಗೂ ಹಾಗೂ ಶಿರಗುಪ್ಪಿ ಕಂಪನಿಗೂ ಒಳ್ಳೆಯದಾಗಲಿ ಅಂತಾ ಹೇಳುತ್ತಾ, ಇನ್ನೂ ಸಂಪೂರ್ಣ ವಿವರವಾಗಿ ಮತ್ತು ನಾನು ಲಿಖಿತ ರೂಪದಲ್ಲಿ MOEF ಗೆ ಬರೆದ ಪತ್ರವನ್ನು ಮಾನ್ಯ ಜಿಲ್ಲಾಧಿಕಾರಿಗಳಿಗೆ ಅರ್ಪಿಸುತ್ತೇನೆ ಎಂದರು.

**14. ಶ್ರೀ. ಬಿ. ವ್ಹಿ. ರೆಡ್ಡಿ, ಬಳ್ಳಾರಿ:**

ಇವತ್ತು ಪರಿಸರ ಸಾರ್ವಜನಿಕ ಸಭೆಯ ಮುಖ್ಯ ಉದ್ದೇಶ ಏನೆಂದರೆ, 4000 ದಿಂದ 10,000 ಮತ್ತು 120 ಎಲ್‌ಪಿಡಿವರೆಗೆ ಡಿಸ್ಟಿಲರಿಯನ್ನು ಮೇಲ್ದರ್ಜೆಗೆ ಮಾಡಲು ಸಾರ್ವಜನಿಕ ಸಭೆ ಇರುವುದು. ಇದರಲ್ಲಿ ಮುಂದೆ ನಾಳೆ ಏನಾದರೂ ಮಾಲಿನ್ಯದ ಅಥವಾ ರೈತರಿಗೆ ತೊಂದರೆಗಳು ಹಾಗೂ ನೀರಿನ ಮಾಲಿನ್ಯ ಇದ್ದರೆ ಗೊತ್ತಾಗುತ್ತದೆ. ಈಗಾಗಲೆ ಗ್ರಾಮ ಪಂಚಾಯತಿಯ ಸದಸ್ಯರು ಮಾತನಾಡಿ ತಮ್ಮ ಸಮಸ್ಯೆಗಳನ್ನು ಜಿಲ್ಲಾಧಿಕಾರಿಗಳಿಗೆ ಹೇಳಿದ್ದಾರೆ, ಒಳ್ಳೆಯದು ಹೇಳಿದ್ದಾರೆ. ಅವರು ಉದ್ಯೋಗದ ಸಮಸ್ಯೆ, ಹಳ್ಳಿಯ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆ ಮತ್ತು ಊರಿನ ಅಭಿವೃದ್ಧಿ ಮತ್ತು ಆರೋಗ್ಯದ ಶಿಬಿರ ಮಾಡಬೇಕು ಎಂದು ತಿಳಿಸಿದ್ದಾರೆ. ಅವರು ಹೇಳಿದ ಎಲ್ಲಾ ವಿಷಯಗಳು record ಆಗಿರುತ್ತದೆ. ಅದನ್ನು ಮಾನ್ಯ ಜಿಲ್ಲಾಧಿಕಾರಿಗಳು ತಪಾಸಣೆ ಮಾಡಬೇಕು. ಇಲ್ಲಿ ಇರುವ ಜನರ ಪ್ರಮುಖ ಬೇಡಿಕೆ ಏನೆಂದರೆ ಉದ್ಯೋಗವನ್ನು ಇಲ್ಲಿಯ ಜನರಿಗೆ ನೀಡಬೇಕು ಎಂದು ಹೇಳಿದರು. ಅದಕ್ಕಾಗಿ ಎಲ್ಲಾ ರೈತರು ಮತ್ತು ಕಾರ್ಖಾನೆಯವರು ಒಂದು ಕಮಿಟಿ ಮಾಡಿ ಏನು ಬೇಕು-ಬೇಡ ಎಂಬ ಸಮಸ್ಯೆಗಳನ್ನು ಪರಿಹರಿಸಬೇಕು ಎಂದು ಕಾರ್ಖಾನೆಯ ಮಂಡಳಿಗೆ ಕೇಳಿಕೊಳ್ಳುತ್ತೇನೆ.

********

ಶ್ರೀ ಜಗದೀಶ ಐ. ಎಚ್. ಪರಿಸರ ಅಧಿಕಾರಿಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ರಾದೇಶಿಕ ಕಛೇರಿ, ಬೆಳಗಾವಿ-2 (ಚಿಕ್ಕೋಡಿ ಕೇಂದ್ರ) ಇವರು ಈ ಪರಿಸರ ಸಾರ್ವಜನಿಕ ಸಭೆಗೆ ಆಗಮಿಸಿ ಮತ್ತು ತಮ್ಮ ಅಧ್ಯಕ್ಷತೆಯಲ್ಲಿ ಈ ಸಭೆಯನ್ನು ನಡೆಸಿಕೊಟ್ಟಿದ್ದಕ್ಕಾಗಿ ಮಾನ್ಯ ಅಪರ ಜಿಲ್ಲಾಧಿಕಾರಿಗಳಿಗೂ ಮತ್ತು ತಹಶೀಲ್ದಾರ ಕಾಗವಾಡ ಅವರಿಗೆ ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸಿದರು ಮತ್ತು ಈ ಸಭೆಯಲ್ಲಿ ಭಾಗವಹಿಸಿ ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಕ್ಕಾಗಿ ಎಲ್ಲಾ ಸುತ್ತಮುತ್ತಲಿನ ನಾಗರಿಕರಿಗೂ ಮತ್ತು ಕಾರ್ಖಾನೆಯ ಆಡಳಿತ ವರ್ಗದ ಅಧಿಕಾರಿಗಳಿಗೂ ಹಾಗೂ ಸಿಬ್ಬಂದಿಗಳಿಗೂ ಮತ್ತು ಈ ಸಭೆಗೆ ಆಗಮಿಸಿದ ಎಲ್ಲಾ NGO ಗಳಿಗೂ ಮಾಧ್ಯಮ ಮಿತ್ರರಿಗೂ ಹಾಗೂ ಎಲ್ಲಾ ಪರಿಸರ ಪ್ರೇಮಿಗಳಿಗೂ ಹೃತ್ಪೂರ್ವಕವಾಗಿ ವಂದನೆಗಳನ್ನು ಸಲ್ಲಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಡಾ. ಬೂದೆಪ್ಪ ಎಚ್. ಬಿ)
**ಅಪರ ಜಿಲ್ಲಾಧಿಕಾರಿಗಳು ಮತ್ತು ಅಪರ ಜಿಲ್ಲಾ**
**ದಂಡಾಧಿಕಾರಿಗಳು ಮತ್ತು**
**ಪರಿಸರ ಸಾರ್ವಜನಿಕ ಆಲಿಕೆ ಸಭೆ ಅಧ್ಯಕ್ಷರು, ಬೆಳಗಾವಿ.**